**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ (ಪೀಠಾಸೀನ, ಸಾಗರ)**

**ಎಸ್.ಸಿ. ಸಂಃ 10006-2023**

ಪಿಡಬ್ಲ್ಯೂ- 2

ಸಿಡಬ್ಲ್ಯೂ- 2

ಸಾಕ್ಷಿ ಹೆಸರು - ಲೋಕೇಶ

ತಂದೆ ಹೆಸರು - ಬಂಗಾರಪ್ಪ

ವಯಸ್ಸು - 65 ವರ್ಷ

ಉದ್ಯೋಗ - ಕೂಲಿ ಕೆಲಸ

ವಾಸಃ - ಯಲಸಿ ಗ್ರಾಮ, ಸೊರಬ ತಾಲ್ಲೂಕು

**ಪ್ರಮಾಣ ವಚನ ಭೋದಿಸಿದ ದಿನಾಂಕಃ 01-07-2025**

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

ಚಾಸಾ1 ನನ್ನ ಮಗ. ಚಾಸಾ 3 ನನ್ನ ಹೆಂಡತಿ, ಚಾಸಾ4 ನನ್ನ ಮಗ. ಚಾಸಾ6 ನನ್ನ ತಮ್ಮ. ಚಾಸಾ 5 ಕನ್ನಪ್ಪ ನಮ್ಮ ಪಕ್ಕದ ಮನೆಯವರು. ನ್ಯಾಯಾಲಯದ ಮುಂದೆ ಇರುವ ಆರೋಪಿತರು ಗೊತ್ತು. ಸೊರಬ ತಾಲ್ಲೂಕು, ಯಲಸಿ ಗ್ರಾಮದಲ್ಲಿ ನನ್ನ ಮನೆ ಇರುತ್ತದೆ. ಆರೋಪಿತರ ಮನೆ ನಮ್ಮ ಮನೆಯ ಪಕ್ಕದಲ್ಲಿ ಇರುತ್ತದೆ. ನಮಗೂ ಮತ್ತು ಆರೋಪಿತರಿಗೂ ನಮ್ಮ ಮನೆಯ ಪಕ್ಕದಲ್ಲಿರುವ ಜಾಗದ ವಿಚಾರವಾಗಿ ತಕರಾರು ಇರುತ್ತದೆ.

ದಿನಾಂಕಃ 06-03-2022 ರಂದು ಸಂಜೆ 4-30 ಗಂಟೆಗೆ ನನ್ನ ಹೆಂಡತಿ ಚಾಸಾ 3 ರವರು ನಮ್ಮ ಮನೆಯ ಹಿಂಭಾಗದಲ್ಲಿರುವ ಜಾಗದಲ್ಲಿ ಸಗಣಿ ಸಾರಿಸುತ್ತಿದ್ದರು. ಆಗ

ಛತ್ರಪತಿಯ ಮಗ ಅರುಣ ಅಲ್ಲಿಗೆ ಬಂದು ನನ್ನ ಹೆಂಡತಿಗೆ ಸೂಳೆ ಮುಂಡೆ, ಬೋಳಿ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದ. ಆಗ ನಾನು ಶಬ್ದವನ್ನು ಕೇಳಿ ಅಲ್ಲಿಗೆ ಬಂದೆ. ಆಗ ನಾನು ಅರುಣನಿಗೆ ಯಾಕೆ ಬೈಯ್ಯುತ್ತಿದ್ದೀಯಾ ಎಂದು ಕೇಳಿದೆ. ಆ ಸಮಯದಲ್ಲಿ ನಾನು ಮನೆಯಲ್ಲಿ ಒಬ್ಬನೇ ಇದ್ದೆ. ನಂತರ ನನ್ನ ಮಗ ಚಾಸಾ1 ಸ್ಥಳದ ಹತ್ತಿರ ಬಂದಿರುತ್ತಾನೆ. ನನ್ನ ಮಗ 2 ನೇ ಆರೋಪಿಗೆ ಏಕೆ ನನ್ನ ತಾಯಿಯನ್ನು ಅವಾಚ್ಯ ಶಬ್ದದಿಂದ ಬೈಯ್ಯುತ್ತಿದ್ದೀರಾ ಎಂದು ಕೇಳಿದ. ಆಗ ಆರೋಪಿತರು ಇಬ್ಬರೂ ನನ್ನ ಮಗ ಚಾಸಾ1 ರವರಿಗೆ ಬೋಳಿ ಮಗನೇ ಎಂದು ಬೈದರು. ನಂತರ 1 ನೇ ಆರೋಪಿ ನನ್ನ ಮಗ ಚಾಸಾ1 ರವರಿಗೆ ನಿನ್ನನ್ನು ಕಡಿದುಬಿಡುತ್ತೇನೆ ಎಂದು ಹೇಳಿ ಕಂದ್ಲಿಯಿಂದ ಚಾಸಾ1 ರವರ ತಲೆಯ ಎಡಭಾಗಕ್ಕೆ ಹೊಡೆದ. ನಾನು ಬಿಡಿಸಲು ಹೋದೆ. ಆಗ 1 ನೇ ಆರೋಪಿ ಕಂದ್ಲಿಯಿಂದ ನನ್ನ ಎಡಭುಜ ಮತ್ತು ಎಡತಲೆಯ ಭಾಗಕ್ಕೆ ಹೊಡೆದಿರುತ್ತಾನೆ. 1 ನೇ ಆರೋಪಿ ಕಂದ್ಲಿಯಿಂದ ನನ್ನ ಮಗ ಚಾಸಾ1 ರವರಿಗೆ ಹಲ್ಲೆ ಮಾಡಿದ್ದರಿಂದ ಆತನ ತಲೆಯಿಂದ ರಕ್ತ ಬರುತ್ತಿತ್ತು. ನನಗೂ ಸಹ ಎಡಭಾಗದ ಕುತ್ತಿಗೆ ಮತ್ತು ಎಡಭುಜದಿಂದ ರಕ್ತ ಬರುತ್ತಿತ್ತು. ಆ ಸಮಯದಲ್ಲಿ ಕನ್ನಪ್ಪ, ಪರಮೇಶ, ಪ್ರಭುರವರು ಸ್ಥಳಕ್ಕೆ ಬಂದು ಜಗಳ ಬಿಡಿಸಿರುತ್ತಾರೆ. ನಂತರ 1 ನೇ ಆರೋಪಿ ನಿಮ್ಮನ್ನು ಬಿಡುವುದಿಲ್ಲ, ನಿಮ್ಮನ್ನು ತೆಗೆದೇ ತೆಗೆಯುತ್ತೇನೆ ಎಂದು ಹೇಳಿ ಕಂದ್ಲಿಯನ್ನು ಅಲ್ಲೇ ಬಿಸಾಡಿ ಹೋದರು.

ನಂತರ ಕನ್ನಪ್ಪ, ಪರಮೇಶ, ಪ್ರಭುರವರು ನನ್ನನ್ನು ಮತ್ತು ಚಾಸಾ1 ರವರನ್ನು ಸೊರಬ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ನಾನು ಮತ್ತು ಚಾಸಾ1 ರವರು ಸೊರಬ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ ಪೋಲೀಸರು ಬಂದರು. 1 ನೇ ಆರೋಪಿ ನನ್ನ ಮಗನನ್ನು ಕೊಲೆ ಮಾಡುವ ಉದ್ದೇಶದಿಂದ ಕಂದ್ಲಿಯಿಂದ ಹಲ್ಲೆ ಮಾಡಿರುತ್ತಾನೆ. ಆಸ್ಪತ್ರೆಯಲ್ಲಿ ನನ್ನ ಮಗ ಚಾಸಾ1 ಪೋಲೀಸರಿಗೆ ದೂರು ನೀಡಿರುತ್ತಾನೆ.

ದೂರು ಕೊಟ್ಟ ನಂತರ ಪೋಲೀಸರು ಘಟನೆ ನಡೆದ ಸ್ಥಳಕ್ಕೆ ಬಂದಿದ್ದರು. ಪೋಲೀಸರು ದಯಾನಂದ ಮತ್ತು ಶಿವಾನಂದರವರನ್ನು ಸ್ಥಳಕ್ಕೆ ಕರೆಸಿದ್ದರು. ಮಹಜರ್ ಮಾಡುವ ಮೊದಲು ನಾನು ಯಾವುದೇ ದಾಖಲೆಗೆ ಸಹಿ ಹಾಕಿರುವುದಿಲ್ಲ. ಪೋಲೀಸರು ಸ್ಥಳಕ್ಕೆ ದಿನಾಂಕಃ07-03-2022 ರಂದು ಮದ್ಯಾಹ್ನ 12-30 ಗಂಟೆಗೆ ಬಂದಿರುತ್ತಾರೆ. ಪೋಲೀಸರಿಗೆ ಘಟನೆ ನಡೆದ ಸ್ಥಳವನ್ನು ನಾನೇ ತೋರಿಸಿರುತ್ತೇನೆ. ಸ್ಥಳದಲ್ಲಿ ಬಿದ್ದಿದ್ದ ಕಂದ್ಲಿಯನ್ನು ತೆಗೆದು ನಾನೇ ಪೋಲೀಸರಿಗೆ ನೀಡಿರುತ್ತೇನೆ. ಪೋಲೀಸರು ಕಂದ್ಲಿಯನ್ನು ಅಮಾನತ್ತುಪಡಿಸಿಕೊಂಡು ನನ್ನ ಸಮಕ್ಷಮ ಮದ್ಯಾಹ್ನ 12 ರಿಂದ 12-30 ಗಂಟೆವರೆಗೆ ಮಹಜರ್ ಕ್ರಮ ಜರುಗಿಸಿರುತ್ತಾರೆ. ಮಹಜರ್ ದಾಖಲೆಗೆ ನಾನು ಸಹಿ ಮಾಡಿರುತ್ತೇನೆ. ಸದರಿ ಮಹಜರ್ ದಾಖಲೆಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-5 ಎಂದು ಸಾಕ್ಷಿಯ ಸಹಿಯನ್ನು ನಿಪಿ5(ಎ) ಎಂದು ಗುರುತಿಸಲಾಯಿತು. ನಿಪಿ-5 ಕ್ಕೆ ಪ್ರಭುಭಟ್ಟ ಮತ್ತು ಪರಮೇಶ ಮತ್ತು ಶಿವಾನಂದ ಸಹಿ ಹಾಕಿರುತ್ತಾರೆ. ಮಹಜರ್ ಮಾಡುವ ಸಮಯದಲ್ಲಿ ಪೋಲೀಸರು ಫೋಟೋಗಳನ್ನು ತೆಗೆದಿರುತ್ತಾರೆ. ಸದರಿ ಫೋಟೋಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ನಿಪಿ6 ಮತ್ತು ನಿಪಿ7 ಎಂದು ಗುರುತಿಸಲಾಯಿತು. ಪೋಲೀಸರು ಸ್ಥಳದಿಂದ ಅಮಾನತ್ತುಪಡಿಸಿಕೊಂಡ ಕಂದ್ಲಿಯನ್ನು ನೋಡಿದರೆ ಗುರುತಿಸಬಲ್ಲೆ. ಸದರಿ ಕಂದ್ಲಿಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ಮು ಮಾ - 4 ಎಂದು ಗುರುತಿಸಲಾಗಿದೆ. ಮು ಮಾ -4 ರ ಮೇಲೆ ಅಂಟಿಸಿರುವ ಚೀಟಿಯ ಮೇಲೆ ನನ್ನ ಸಹಿ ಇರುತ್ತದೆ.

ಘಟನೆ ಸಮಯದಲ್ಲಿ ನನ್ನ ಮಗ ಚಾಸಾ1 ತುಂಬು ತೋಳಿನ ಶರ್ಟ್ ಮತ್ತು ಟೋಪಿ ಧರಿಸಿದ್ದ. ನಾನು ಒಂದು ಆಕಾಶ ನೀಲಿ ಬಣ್ಣದ ಅರ್ಧ ತೋಳಿನ ಶರ್ಟ್ ನ್ನು ಧರಿಸಿದ್ದೆ. ನಾನು ಮತ್ತು ನನ್ನ ಮಗ ಧರಿಸಿದ್ದ ಶರ್ಟ್ ಗಳಿಗೆ ರಕ್ತದ ಕಲೆ ಆಗಿತ್ತು. ನಾನು ಸದರಿ ಬಟ್ಟೆಗಳನ್ನು ದಿನಾಂಕಃ 07-03-2022 ರಂದು ಪೋಲೀಸ್ ಠಾಣೆಗೆ ಹೋಗಿ

ನೀಡಿರುತ್ತೇನೆ. ಪೋಲೀಸ್ ಠಾಣೆಗೆ ದಯಾನಂದ ಮತ್ತು ಕನ್ನಪ್ಪ ಬಂದಿದ್ದರು. ನನ್ನ ಮಗ ಅವನ ಬಟ್ಟೆಯನ್ನು ಆತನೇ ಪೋಲೀಸರಿಗೆ ನೀಡಿರುತ್ತಾನೆ. ಪೋಲೀಸರು ನಾನು ಮತ್ತು ನನ್ನ ಮಗ ನೀಡಿದ ಬಟ್ಟೆಗಳನ್ನು ಒಂದು ಬಿಳಿ ಬಟ್ಟೆಯಲ್ಲಿ ಹಾಕಿ ಅಮಾನತ್ತುಪಡಿಸಿಕೊಂಡು ಅಮಾನತ್ತು ಮಹಜರ್ ಕ್ರಮ ಜರುಗಿಸಿರುತ್ತಾರೆ. ಸದರಿ ಅಮಾನತ್ತುಪಂಚನಾಮೆಯನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ಅಮಾನತ್ತುಪಂಚನಾಮೆಯನ್ನು ಈಗಾಗಲೇ ನಿಪಿ3 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ3(ಬಿ) ಎಂದು ಗುರುತಿಸಲಾಯಿತು. ಸದರಿ ಅಮಾನತ್ತು ಪಂಚನಾಮೆಗೆ ಪ್ರಭು ಮತ್ತು ಪರಮೇಶ ಸಹಿ ಹಾಕಿರುತ್ತಾರೆ. ಪೋಲೀಸರು ಮಹಜರ್ ಮಾಡುವ ಸಮಯದಲ್ಲಿ ಮತ್ತೇನು ಮಾಡಿದರು ಎಂದು ನನಗೆ ನೆನಪಿಲ್ಲ.

ಪೋಲೀಸರು ಅಮಾನತ್ತುಪಡಿಸಿಕೊಂಡ ಬಟ್ಟೆಗಳನ್ನು ಮತ್ತು ಟೋಪಿಯನ್ನು ನೋಡಿದರೆ ಗುರುತಿಸಬಲ್ಲೆ. ಟೋಪಿಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ಮು ಮಾ 1 ಎಂದು ಗುರುತಿಸಲಾಗಿದೆ. ನನ್ನ ಮಗನ ಶರ್ಟ್ ನ್ನು ನೋಡುತ್ತಿದ್ದು ಅದನ್ನು ಈಗಾಗಲೇ ಮು ಮಾ2 ಎಂದು ಗುರುತಿಸಲಾಗಿದೆ. ನಾನು ಧರಿಸಿದ್ದ ಶರ್ಟ್ ನ್ನು ನೋಡುತ್ತಿದ್ದು ಅದನ್ನು ಈಗಾಗಲೇ ಮು ಮಾ 3 ಎಂದು ಗುರುತಿಸಲಾಗಿದೆ.

ಪೋಲೀಸರು ಸ್ಥಳ ಪಂಚನಾಮೆ ಮಾಡಿದ ಸಮಯದಲ್ಲಿ ನನ್ನನ್ನು ವಿಚಾರಿಸಿರುತ್ತಾರೆ. ಆಗ ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ. ಆರೋಪಿತರು ಈ ದಿವಸ ನ್ಯಾಯಾಲಯದ ಮುಂದೆ ಇರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

(ಮಾನ್ಯ ಸ.ಅ.ರವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿದ್ದು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)

<u>ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ</u>

1 ನೇ ಆರೋಪಿ ನನ್ನ ಹೆಂಡತಿಗೆ ಅವಾಚ್ಯ ಶಬ್ದಗಳಿಂದ ಬೈದಾಗ ಆ ಸಮಯದಲ್ಲಿ ಮನೆಯಲ್ಲಿದ್ದ ನನ್ನ ಮಗ ಚಾಸಾ1 ಸ್ಥಳಕ್ಕೆ ಬಂದು ನನ್ನ ತಾಯಿಗೆ ಯಾಕೆ ಬೈಯ್ಯುತ್ತಿದ್ದೀಯಾ ಎಂದು ಕೇಳಿದ ಎಂದರೆ ಸರಿ. ಆಗ 1 ನೇ ಆರೋಪಿ ನೀನ್ಯಾರೋ ಬೋಳಿ ಮಗನೆ ಕೇಳುವುದಕ್ಕೆ , ನಿಮ್ಮದು ಅತಿಯಾಯಿತು ಅಂತಾ ಕೈಯಿಂದ ಚಾಸಾ1 ರವರ ಮೈಕೈಗೆ ಹೊಡೆದಿದ್ದ, ನಾನು ಗಲಾಟೆ ಬಿಡಿಸಲು ಹೋದಾಗ ಅಲ್ಲೇ ಇದ್ದ 2 ನೇ ಆರೋಪಿ ಕೈಯಿಂದ ನನ್ನ ಮೈಕೈಗೆ ಗುದ್ದಿದ ಎಂದರೆ ಸರಿ. 2 ನೇ ಆರೋಪಿ ಸಹ ನನ್ನ ಮತ್ತು ನನ್ನ ಮಗ ಚಾಸಾ1 ರವರನ್ನು ಉದ್ದೇಶಿಸಿ ಈ ದಿನ ಬದುಕಿಕೊಂಡಿದ್ದೀರಾ, ಇನ್ನೊಂದು ಸಾರಿ ಸಿಕ್ಕರೆ ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದ ಎಂದರೆ ಸರಿ. ಸದರಿ ವಿಚಾರವನ್ನು ನಾನು ಪೋಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ ಹೇಳಿರುತ್ತೇನೆ ಎಂದರೆ ಸರಿ.

ಸ್ಥಳ ಪಂಚನಾಮೆ ಮಾಡುವ ಮೊದಲು ನನಗೆ, ಪ್ರಭುಭಟ್ಟರಿಗೆ ಮತ್ತು ಶಿವಾನಂದ ಇವರಿಗೆ ಪೋಲೀಸರು ಈಗ ತೋರಿಸಿದ ನೋಟೀಸ್ ನ್ನು ಜಾರಿ ಮಾಡಿದ್ದರು ಎಂದರೆ ಸರಿ. ಸದರಿ ನೋಟೀಸ್ ನ್ನು ನಿಪಿ-8 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ8-(ಎ) ಎಂದು ಗುರುತಿಸಲಾಯಿತು. ನನಗೆ ಮತ್ತು ಚಾಸಾ1, ಚೇತನ್ ಕುಮಾರ್ ಮತ್ತು ದಯಾನಂದರವರಿಗೆ ನಿಪಿ 2 ರಂತೆ ನೋಟೀಸ್ ಜಾರಿ ಮಾಡಿದ್ದರು ಎಂದರೆ ಸರಿ. ನಿಪಿ 2 ರಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿಯ ಸಹಿಯನ್ನು ನಿಪಿ2(ಬಿ) ಎಂದು

ಗುರುತಿಸಲಾಯಿತು. ಸದರಿ ನಿಪಿ3 ಪಂಚನಾಮೆಯನ್ನು ದಿನಾಂಕಃ 14-03-2022 ರಂದು ಮದ್ಯಾಹ್ನ 2 ರಿಂದ 3 ಗಂಟೆ ವರೆಗೆ ಜರುಗಿಸಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ಈಗ ತೋರಿಸಿದ ನಿಪಿ4 ರಂತೆ ಫೋಟೋ ತೆಗೆದಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಈ ಎನ್ ವಕೀಲರಿಂದಃ**

ನನಗೆ ಓದಲು ಬರೆಯಲು ಬರುವುದಿಲ್ಲ. ನನ್ನ ಮಗ ಚಾಸಾ1 ಬಿ.ಕಾಂ., ಓದಿರುತ್ತಾನೆ. ಚಾಸಾ4 ಶ್ರೀಧರ ಸಿವಿಲ್ ಇಂಜಿನಿಯರಿಂಗ್ ವ್ಯಾಸಂಗ ಮಾಡಿರುತ್ತಾನೆ. ಆಸ್ಪತ್ರೆಯಲ್ಲಿದ್ದಾಗ ಪೋಲೀಸರು ನನ್ನ ಮತ್ತು ನನ್ನ ಮಗನನ್ನು ವಿಚಾರಿಸಿರುತ್ತಾರೆ. ಪೋಲೀಸರು ನಾನು ಹೇಳಿದ್ದನ್ನು ಬರೆದುಕೊಂಡಿರುತ್ತಾರೆ. ನಮ್ಮ ಮನೆಯ ಹಿಂಭಾಗದ ಖಾಲಿ ಜಾಗದಲ್ಲಿ ನಾನು ಬೋರ್ ಕೊರೆಸಿದ್ದಾಗ ಆರೋಪಿತರು ಸದರಿ ಜಾಗ ನಮಗೆ ಸೇರುತ್ತದೆ ಎಂದು ಹೇಳಿದ್ದರು ಎಂದರೆ ಸರಿ. ನನ್ನ ಮತ್ತು ಆರೋಪಿತರ ಮನೆ ಅಕ್ಕಪಕ್ಕ ಮನೆ ಎಂದರೆ ಸರಿ. ನಮ್ಮಿಬ್ಬರ ಮನೆ ಸರ್ಕಾರಿ ಜಾಗದಲ್ಲಿರುತ್ತದೆ ಎಂದರೆ ಸರಿ. ಇಲ್ಲಿಯವರೆಗೂ ಸರ್ಕಾರದಿಂದ ನಮಗೆ ಹಕ್ಕುಪತ್ರ ಕೊಟ್ಟಿರುವುದಿಲ್ಲ ಎಂದರೆ ಸರಿ.

ಮು ಮಾ 4 ಕಂದ್ಲಿ ನನಗೆ ಸೇರಿದ್ದು ಎಂದರೆ ಸರಿಯಲ್ಲ. ಕೃತ್ಯ ನಡೆದ ಸ್ಥಳ ಖಾಲಿ ಜಾಗ ಎಂದರೆ ಸರಿ. ನಿಪಿ 7 ಫೋಟೋದಲ್ಲಿ ಕಾಣುವ ಕಂದ್ಲಿ ನ್ಯಾಯಾಲಯದ ಮುಂದೆ ಇರುವ ಮು ಮಾ 4 ಕಂದ್ಲಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ7 ಫೋಟೋದಲ್ಲಿ ಕಾಣುವ ಕಂದ್ಲಿಯಲ್ಲಾಗಲೀ ಮತ್ತು ನ್ಯಾಯಾಲಯದ ಮುಂದೆ ಇರುವ ಮು ಮಾ 4 ಕಂದ್ಲಿಯಲ್ಲಾಗಲೀ ರಕ್ತದ ಕಲೆ ಇರುವುದಿಲ್ಲ ಎಂದರೆ ಸಾಕ್ಷಿ ಇತ್ತು ಎಂದು ಹೇಳುತ್ತಾರೆ.

ನಾನು ಆ ದಿವಸ ಸೊರಬ ಆಸ್ಪತ್ರೆಗೆ ಹೋಗಿದ್ದನ್ನು ಹೊರತುಪಡಿಸಿ ಮತ್ತೆ ಆಸ್ಪತ್ರೆಗೆ ಹೋಗಿರುವುದಿಲ್ಲ. ಸಾಕ್ಷಿ ಮುಂದುವರೆದು ಒಂದು ವಾರದ ನಂತರ ಹೊಲಿಗೆ ಬಿಚ್ಚಿಸಲು ಆಸ್ಪತ್ರೆಗೆ ಹೋಗಿದ್ದೆ ಎಂದು ಹೇಳುತ್ತಾರೆ. ಆ ಸಮಯದಲ್ಲಿ ನನ್ನ ಮಗ ಚಾಸಾ1 ರವರು ಬಂದಿದ್ದರು. ನಾನು ಯಾವ ದಿನಾಂಕದಂದು ಹೊಲಿಗೆ ಬಿಚ್ಚಿಸಲು ಆಸ್ಪತ್ರೆಗೆ ಹೋಗಿದ್ದೆ ಎಂದು ನನಗೆ ನೆನಪಿಲ್ಲ. ನಾನು ಹೊಲಿಗೆ ಬಿಚ್ಚಿಸಲು ಆಸ್ಪತ್ರೆಗೆ ಹೋಗಿದ್ದೆ ಎಂದು ತೋರಿಸಲು ಪೋಲೀಸರಿಗೆ ಯಾವುದೇ ದಾಖಲೆಯನ್ನು ಕೊಟ್ಟಿರುವುದಿಲ್ಲ. ನಾನು ಪೋಲೀಸರ ಮುಂದೆ ಜಾಗದ ವಿಚಾರದ ಬಗ್ಗೆ ಹೇಳಿಕೆ ನೀಡಿರುತ್ತೇನೆ. ಪೋಲೀಸರು ಸ್ಥಳ ಮಹಜರ್ ಮಾಡುವ ಸಮಯದಲ್ಲಿ ಸದರಿ ಹೇಳಿಕೆ ನೀಡಿರುತ್ತೇನೆ. ನಾನು ಬಟ್ಟೆ ನೀಡಲು ಪೋಲೀಸ್ ಠಾಣೆಗೆ ಹೋಗಿದ್ದನ್ನು ಹೊರತುಪಡಿಸಿ ಮತ್ತೆ ಪೋಲೀಸ್ ಠಾಣೆಗೆ ಹೋಗಿರುವುದಿಲ್ಲ ಎಂದರೆ ಸರಿ. ಪೋಲೀಸರು ಆಸ್ಪತ್ರೆಗೆ ಬಂದಾಗ ರಕ್ತ ಕಲೆ ಆಗಿದ್ದ ಬಟ್ಟೆಗಳನ್ನು ಪೋಲೀಸರಿಗೆ ಕೊಡಬಹುದಿತ್ತು ಎಂದರೆ ಸರಿ. ಸ್ಥಳ ಪಂಚಾನಮೆ ಮಾಡುವ ಸಮಯದಲ್ಲಿ ನಾನು ಪೋಲೀಸರಿಗೆ ರಕ್ತ ಕಲೆಯಾಗಿದ್ದ ಬಟ್ಟೆಗಳನ್ನು ಕೊಡಬಹುದಿತ್ತು ಎಂದರೆ ಸರಿ. ಮಹಜರ್ ಮಾಡಿದ ಮಾರನೇ ದಿನ ಪೋಲೀಸರು ನಮ್ಮ ಮನೆಯಿಂದ ಬಟ್ಟೆಗಳನ್ನು ತೆಗೆದುಕೊಂಡು ಹೋಗಿರುತ್ತಾರೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಹಾಗೆ ಯಾವುದೇ ಘಟನೆ ನಡೆಯದಿದ್ದರೂ ಸಹ ನನ್ನ ಮತ್ತು ಆರೋಪಿತರ ನಡುವೆ ಜಾಗದ ವಿಚಾರವಾಗಿ ತಕರಾರು ಇರುವುದರಿಂದ ನಾನು ಮತ್ತು ನನ್ನ ಮಗ ಆರೋಪಿತರ ವಿರುದ್ಧ ಸುಳ್ಳು ದೂರನ್ನುನೀಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಹೇಳಿದ ರೀತಿ ಪೋಲೀಸರು ಸ್ಥಳ ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ,

ನನ್ನ ಹೆಂಡತಿ ಚಾಸಾ3 ರವರು ಪೋಲೀಸ್ ಠಾಣೆಗೆ ಹೋಗಿರುವುದಿಲ್ಲ. ನಾನು ಪೋಲೀಸ್ ಠಾಣೆಗೆ ಹೋಗಿರುವುದಿಲ್ಲ ಮತ್ತು ಪೋಲೀಸರಿಗೆ ರಕ್ತದ ಕಲೆಯ ಬಟ್ಟೆಗಳನ್ನು ಕೊಟ್ಟಿರುವುದಿಲ್ಲ ಮತ್ತು ನನ್ನ ಸಮಕ್ಷಮ ನಿಪಿ–3 ರಂತೆ ಯಾವುದೇ ಅಮಾನತ್ತು ಪಂಚನಾಮೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಈಗ ತೋರಿಸಿದ ಸ್ಥಳ ನಕಾಶೆಯಲ್ಲಿ ನಾನು ಸಹಿ ಹಾಕಿರುವುದಿಲ್ಲ ಎಂದರೆ ಸರಿ. ನಮ್ಮ ಗ್ರಾಮದಲ್ಲಿ ಸುಮಾರು 55 ಮನೆಗಳು ಇರುತ್ತವೆ. ಘಟನೆ ನಡೆದ ಸ್ಥಳದ ಹತ್ತಿರ ಸಾಮಾನ್ಯವಾಗಿ ಸಾಕಷ್ಟು ಜನರು ಓಡಾಡುತ್ತಾರೆ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ಕೊಡುವ ಸಲುವಾಗಿ ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).